ಅಸಲು ದಾವಾ ಸಂಖ್ಯೆ .  276- 2014

ಪಿ.ಡಬ್ಲ್ಯೂ-2
ದಿಃ 07-03-2020

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀ ಡಿ ಆರ್ ಎಸ್  ವಕೀಲರಿಂದಃ-

ವಾದಿಯು  ನಮ್ಮ ಗ್ರಾಮಸ್ಥರು ಮತ್ತು ನನ್ನ ತಂದೆಯವರ ತಂಗಿ . ದಾವಾ ವ್ಯಾಜ್ಯ ಕಾರಣ ನನಗೆ ಗೊತ್ತಿರುತ್ತದೆ . ವಾದಿಯ ಜಾಗ ಒತ್ತುವರಿ ಆಗಿದೆ ಅದು ಬಿಡಿಸಿಕೊಡಬೇಕು ಎಂದು ದಾವಾ ಹೂಡಿರುತ್ತಾರೆ .ವ್ಯಾಜ್ಯ ಕಾರಣ ಯಾವಾಗ ಆಗಿತು ಎಂಬುವುದರ ಬಗ್ಗೆ ನನಗೆ ಮಾಹಿತಿ ಇಲ್ಲ . ದಾವಾ ಆಸ್ತಿಯ ಖಾನೆ ಸುಮಾರಿ ಸಂ ಃ 255 ಎ ಜಂಜರ್ ನಂ 206 ಆಗಿರುತ್ತದೆ . ಅದನ್ನು ಹೊರತುಪಡಿಸಿ 263 ಸಂಖ್ಯೆ ಇರುತ್ತದೆ ಎಂದರು . 263 ಕೇಸ್ ನಂಬರ್ ಆಗಿರುತ್ತದೆ ಎಂದರು . ದಾವಾ ಆಸ್ತಿಯ ಸ್ವಾಧೀನಾದಲ್ಲಿ ವಾದಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರ ಸರಿಯಲ್ಲ . ನನಗೆ ಈ ದಾವಾದ ಬಗ್ಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ . ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 27 ಗಜ ಉತ್ತರ ದಕ್ಷಿಣ 20 ಗಜ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ವಾದಿಯು 17 ½X 78 ಅಡಿ ವಿಸ್ತೀರ್ಣದಲ್ಲಿ ಮಾತ್ರ ಸ್ವಾಧೀನಾದಲ್ಲಿ ಇದ್ದಾರೆ ಎಂದರೆ ಸರಿ . ದಾವಾ ಆಸ್ತಿಗಳನ್ನು ವಾದಿಯು ಕ್ರಯಕ್ಕೆ ಪಡೆದಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರ ಸರಿಯಲ್ಲ . ಸಾಕ್ಷಿಗೆ ನಿಡಿ 1 ರ ಭಾವಚಿತ್ರವನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಕಂಡುಬರುವ ಪಾಯ  ಹಾಕಿರುವ ಜಾಗವು ವಾದಿಯು 17 ½X 78 ಅಡಿ ವಿಸ್ತೀರ್ಣವುಳ್ಳ ಮನೆಯ ಯಾವ ದಿಕ್ಕಿಗೆ ಬರುತ್ತದೆ ಎಂಬ ಪ್ರಶ್ನೆಗೆ  ಸದರಿ ನಿಡಿ 1 ರಲ್ಲಿ ಕಾಣಿಸುವ ಪಾಯ ಹಾಕಿರುವ ಜಾಗವು ಮೇಲೆ ಹೇಳಿದ  ಮನೆಯ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರು . ಸದರಿ ದಕ್ಷಿಣ ಕ್ಕೆ ನಿಡಿ 1 ರಲ್ಲಿ ಕಾಣಿಸುಕೊಳ್ಳುವ ಪಾಯ ಹಾಕಿರುವ ಜಾಗವು ಆಶ್ರಯ ಯೋಜನೆ ಅಡಿಯಲ್ಲಿ 2 ನೇ ಪ್ರತಿವಾದಿಗೆ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಮನೆ ಕಟ್ಟವುದಕ್ಕೆ ತೊಂದರೆ ಮಾಡುವ ಉದ್ದೇಶದಿಂದ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ . ವಾದಿಯು ನನ್ನ ಸಂಬಂಧಿಕಾರಿದ್ದು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.